ಬಗ್ಗೆ ಗಮನಕೊಡುತ್ತೇವೆ. ಇನ್ನು ಕಬ್ಬಿನ ರೈತರ ಬಗ್ಗೆ ಮಾತನಾಡಲು ಈಗಾಗಲೇ ಮಾನ್ಯ ಪ್ರಕಾಶ್ ಹುಕ್ಕೇರಿಯವರನ್ನು ರೈತರು ಇರುವ ಜಾಗಕ್ಕೇ ಕಳುಹಿಸಿದ್ದೇನೆ. ರೈತರೂ ಕೂಡ ನಮ್ಮ ಮನೆ ಮುಂದೆ ಧರಣಿ ಮಾಡಲು ಬರುತ್ತಿದ್ದಾರೆ ಎನ್ನುವ ಮಾತನ್ನು ತಾವು ಹೇಳಿದಿರಿ. ಈಗ ಅಲ್ಲಿ ಇದ್ದಾರೆ. ರೈತರಿಗಾಗಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಬೀಜಕ್ಕೆ, ಗೊಬ್ಬರಕ್ಕೆ ಹಣ ಬಿಡುಗಡೆ ಮಾಡಿದ್ದೇವೆ, ಎಲ್ಲಿ ಇದರಲ್ಲಿ ತಾರತಮ್ಯವಾಗಿದೆ, ಎಲ್ಲಿ ಹಣ ಬಿಡುಗಡೆಯಾಗಬೇಕಾಗಿದೆ ಎನ್ನುವ ಬಗ್ಗೆ ಅವರ ಬೇಡಿಕೆಗಳ ವಿವರವನ್ನು ತೆಗೆದುಕೊಂಡು ಅದರ ಬಗ್ಗೆಯೂ ಕೂಡ ಸರ್ಕಾರ ಚಿಂತನೆ ಮಾಡುತ್ತದೆ.

**ಶ್ರೀ ವಾಟಾಳ್ ನಾಗರಾಜ್** ; ಈಗಾಗಲೇ ರೈತರುಗಳು ತಮ್ಮ ಮನೆ ಮುಂದೆ ಬಂದು ಧರಣಿ ಮಾಡುತ್ತಿದ್ದಾರೆ. ಬಹಳ ಪ್ರಮುಖವಾಗಿ ಬೆಳೆ ವಿಮೆ ಪರಿಹಾರ ಹಣ ಬಿಡುಗಡೆ ಆಗದಿರುವ ಬಗ್ಗೆ ರೈತರುಗಳ ಮೇಲೆ ಕೇಸ್ ಹಾಕಿರುವಂಥದ್ದರ ಬಗ್ಗೆ, ಬಹಳ ಪ್ರಾಮುಖ್ಯವಾದ ಕಬ್ಬಿನ ದರದ ಬಗ್ಗೆ ಹೇಳಬೇಕು. ಈಗಿರುವ ಟನ್ ದರ 850 ರೂಪಾಯಿ ಏನಿದೆ ಆ ದರ ಬಹಳ ಹಳೆಯ ದರವಾಗಿದೆ. ಒಂದು ಟನ್‌ಗೆ 1250 ರೂಪಾಯಿ ಕೊಟ್ಟರೆ ಏನೋ ಒಂದು ರೀತಿ ಪರವಾಗಿಲ್ಲ ಎನ್ನಬಹುದು.

**ಶ್ರೀ ಧರ್ಮಸಿಂಗ್** : ಹೌದು. ಏಕೆಂದರೆ ಅವರು ಬೇರೆ ಕಡೆ ನಿಂತಿದ್ದಾರೆ. ತಾವು ಸದನದಲ್ಲಿ ಇರುತ್ತೀರಿ ಎಂದು ನಾನು ಇಲ್ಲಿಗೆ ಬಂದೆ. ಅದಕ್ಕೇ ನಾನು ಪ್ರಕಾಶ್ ಹುಕ್ಕೇರಿಯವರೆಗೆ ಅಲ್ಲಿಗೆ ಹೋಗಿ ನೋಡಿಕೊಂಡು ಬನ್ನಿ ಎಂದು ಹೇಳುವುದರ ಜೊತೆಗೆ ಅವರ ಬೇಡಿಕೆಗಳನ್ನು ಕೇಳಿ ಮನವಿ ಪತ್ರ ಏನು ಕೊಡುತ್ತಾರೆ ಅದನ್ನು ಸ್ವೀಕಾರ ಮಾಡಿಕೊಂಡು ಬನ್ನಿ ಎಂದು ಹೇಳಿದ್ದೇನೆ. ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

**(X) ವಿಷಯ : ಪುತ್ತೂರು ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಊಟದ ವ್ಯವಸ್ಥೆಯನ್ನು ನಿಲ್ಲಿಸಿರುವ ಬಗ್ಗೆ.**

**ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು)** : ಮಾನ್ಯ ಅಧ್ಯಕ್ಷರೆ, ಪುತ್ತೂರು ತಾಲ್ಲೂಕಿನಲ್ಲಿ 100 ಬೇಡ್‌ಗಳ ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಇದೆ. ನಿನ್ನೆಯಿಂದ ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಊಟ ಹಾಕುತ್ತಿದ್ದ ವ್ಯವಸ್ಥೆಯನ್ನು ನಿಲ್ಲಿಸಿಬಿಟ್ಟಿದ್ದಾರೆ. ನಿನ್ನೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವತಿಯಿಂದ ರೋಗಿಗಳಿಗೆ ಊಟದ ವ್ಯವಸ್ಥೆಯನ್ನು ಮಾಡಿದ್ದರು. ಇವೊತ್ತು ಸಾರ್ವಜನಿಕರು ಅಂಗಡಿ ಅಂಗಡಿಗೆ ಹೋಗಿ ಬೇಡಿ ಆಹಾರದ ಧಾನ್ಯ ತಂದು ಇವೊತ್ತಿಗೆ ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಆಸ್ಪತ್ರೆ ಡಿ.ಹೆಚ್.ಒ. ಅಥವಾ ಸಿ,ಎಸ್. ರವರನ್ನು ಹೋಗಿ ಕೇಳಿದರೆ ಅವರು ಏನು ಹೇಳುತ್ತಾರೆಂದರೆ ಜಿಲ್ಲಾ ಪಂಚಾಯತ್‌ನಲ್ಲಿ ಹಣವಿಲ್ಲದ ಕಾರಣ ಊಟದ ವ್ಯವಸ್ಥೆಯನ್ನು ನಿಲ್ಲಿಸಲಾಗಿದೆ ಎಂದು ಹೇಳಿದ್ದಾರೆ. ಊಟಕ್ಕೆ ಗತಿ ಇಲ್ಲದ ಬಡವರುಗಳೇ ಆ ಆಸ್ಪತ್ರೆಗೆ ರೋಗಿಗಳಾಗಿ ಹೋಗಿದ್ದಾರೆ. ಸ್ವಲ್ಪ ಊಟಕ್ಕೆ ಗತಿ ಇದ್ದರೂ ಸಾಕು, ಅಂಥವರುಗಳೂ ಕೂಡ ಸರ್ಕಾರಿ ಆಸ್ಪತ್ರೆಗೆ

ಬರುವುದಿಲ್ಲ. ಏಕೆಂದರೆ ನಾನು ಮೊನ್ನೆಯೇ ಹೇಳಿದಂತೆ ಮೂರುವರೆ ಲಕ್ಷ ರೂ. ವೆಚ್ಚದ ಐವತ್ತು ಕೆ.ವಿ. ಜನರೇಟರ್ ವರ್ಕ್ಸ್ ಆಗದೇ ಇರುವುದರಿಂದ ಯಾರೂ ಅಲ್ಲಿಗೆ ಬರುತ್ತಿಲ್ಲ. ಅಲ್ಲಿ ಯಾವುದೇ ಆಪರೇಶನ್ ಮಾಡುತ್ತಿಲ್ಲವೆಂದು ಬರುತ್ತಿಲ್ಲ. ಸಾಮಾನ್ಯವಾಗಿ ಗತಿಗೆಟ್ಟ ಜನತೇ ಆ ಆಸ್ಪತ್ರೆಗೆ ಬರುತ್ತಿದ್ದಾರೆ. ಅಂಥವರಿಗೆ ಊಟದ ವ್ಯವಸ್ಥೆಯನ್ನು ನಿಲ್ಲಿಸಿದ ಕಾರಣ ಅವರಿಗೆ ಬಹಳ ತೊಂದರೆಯಾಗಿದೆ. ದಯಮಾಡಿ ಸರ್ಕಾರ ಕೂಡಲೇ ಊಟದ ವ್ಯವಸ್ಥೆ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೆ. ಪ್ರಭಾಕರ ಬಂಗೇರ(ಬೆಳ್ತಂಗಡಿ)** : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಕಡೆಗಳಲ್ಲಿಯೂ ಕೂಡ ಜಿಲ್ಲಾ ಪಂಚಾಯತ್‌ನಿಂದ ಹಣ ಪೂರೈಕೆ ಆಗದೇ ಇರುವುದರಿಂದ ಅಲ್ಲಿಯೂ ಕೂಡ ಊಟದ ವ್ಯವಸ್ಥೆ ಇಲ್ಲದಾಗಿದೆ. ಇದು ಪುತ್ತೂರಿನ ಸಮಸ್ಯೆ ಒಂದೇ ಅಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಊಟದ ವ್ಯವಸ್ಥೆ ಇಲ್ಲದಾಗಿದೆ. ಆದಕಾರಣ ಅಲ್ಲಿ ಊಟದ ವ್ಯವಸ್ಥೆ ಮಾಡಬೇಕೆಂದು ಈ ಮೂಲಕ ಒತ್ತಾಯ ಮಾಡುತ್ತೇನೆ.

**ಶ್ರೀ ಬಿ. ನಾಗರಾಜ್ ಶೆಟ್ಟಿ(ಬಂಟ್ವಾಳ)** : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿರುವಂಥ ಎಲ್ಲಾ ಸರ್ಕಾರಿ ಆಸ್ಪತೆಗಳಲ್ಲಿ ಊಟದ ವ್ಯವಸ್ಥೆಯಲ್ಲಿ ಅವ್ಯವಸ್ಥೆಯಾಗಿದೆ. ಸರ್ಕಾರ ಅದರ ಬಗ್ಗೆ ಕೂಡಲೇ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇವೆ.

**ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)**: ಮಾನ್ಯ ಅಧ್ಯಕ್ಷರೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಇರುವಂಥ ರೋಗಿಗಳಿಗೆ ಊಟದ ವ್ಯವಸ್ಥೆಯನ್ನು ನಿಲ್ಲಿಸಿರತಕ್ಕಂಥದ್ದು ಅಕ್ಷಮ್ಯ ಅಪರಾಧ. ಪ್ರಾಯಶಃ ಹಣ ಇಲ್ಲದೇ ಜಿಲ್ಲಾ ಪಂಚಾಯತ್‌ನವರು ಈ ರೀತಿ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ. ನನಗೆ ಈ ಬಗ್ಗೆ ತಕ್ಷಣದಲ್ಲಿ ಉತ್ತರಿಸಲು ಮಾಹಿತಿ ಇಲ್ಲದಾಗಿದೆ. ಆ ಕಾರಣಕ್ಕಾಗಿ ನಾನು ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಅವರು ಪ್ರಸ್ತಾಪ ಮಾಡಿದ ಜಮಖಂಡಿ ಕ್ಷೇತ್ರ ಹಾಗೂ ಮೊದಲಾದ ಕಡೆಗೆ ನಾನು ಆರೋಗ್ಯ ಇಲಾಖೆಯ ನಿರ್ದೇಶಕರಿಗೆ ಈ ಕೂಡಲೇ ನಿರ್ದೇಶನ ಕೊಟ್ಟು ಗಮನ ಸೆಳೆಯುತ್ತೇನೆ. ಈ ವಿಚಾರದ ಬಗ್ಗೆ ಮಾಹಿತಿಯನ್ನು ಪಡೆದು, ಒಂದು ವೇಳೆ ಹಣ ಇಲ್ಲದ ಕಾರಣಕ್ಕಾಗಿಯೇ ಊಟದ ವ್ಯವಸ್ಥೆ ನಿಂತಿದ್ದರೆ ಅದಕ್ಕೆ ಪರ್ಯಾಯಾವಾದಂಥ ವ್ಯವಸ್ಥೆಯನ್ನೂ ಕೂಡ ಮಾಡಬೇಕು ಎಂದು ಅವರಿಗೆ ಸರ್ಕಾರ ಸೂಚನೆಯನ್ನು ಕೊಡುತ್ತದೆ.

**(xi) ವಿಷಯ : ಫೈನಾನ್ಸ್ ಕಂಪನಿಗಳಲ್ಲಿರುವ ಠೇವಣಿದಾರರ ಬಗ್ಗೆ**

† **ಶ್ರೀ ಎನ್, ಯೋಗೀಶ್‌ಭಟ್(ಮಂಗಳೂರು)** : ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ ಮಾತ್ರವಲ್ಲ, ಇಡೀ ರಾಜ್ಯಾದ್ಯಂತ ಇವೊತ್ತು ಲಕ್ಷಾಂತರ ಮಂದಿ ಈ ಫೈನಾನ್ಸ್ ಕಂಪನಿಗಳಲ್ಲಿ ಯಾರು ಠೇವಣಾತಿಗಳನ್ನು ಇಟ್ಟುಕೊಂಡಿದ್ದಾರೆ ಅವರಿಗೆ ಬಡ್ಡಿ ಇರಲಿ, ಅಸಲು ಹಣವೇ ಸಿಗುತ್ತಿಲ್ಲ. ಹೀಗಾಗಿ ಇವರುಗಳು ಅತ್ಯಂತ